## 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.

**ದಿಃ 22.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ.ಪಿ ಎಂ ವಕೀಲರಿಂದಃ**

ನಾನು ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿವೆ. ನೀವು ಏನು ಕೆಲಸ ಮಾಡುತ್ತಿರಿ ಎಂದರೆ ಸಾಕ್ಷಿ ಏನೂ ಮಾಡುವುದಿಲ್ಲ ಮನೆಯಲ್ಲಿಯೇ ಇರುತ್ತೇನೆ ಎನ್ನುತ್ತಾರೆ. ನನ್ನ ಗಂಡ ಯಾವುದೇ ಕೆಲಸ ಮಾಡುವುದಿಲ್ಲ. ದೀ 24/12/2022 ರಂದು ನನ್ನ ಮಗನಿಗೆ ಅಪಘಾತವಾಗಿದೆ ಎಂದು ದೂರು ದಾಖಲಾಗಿದ್ದು ಎಂದು ಗೊತ್ತಾ ಎಂದರೆ ಗೊತ್ತು ಎನ್ನುತ್ತಾರೆ. ದೂರಿನಲ್ಲಿ ನನ್ನ ಮಗ ಮತ್ತು ಮತ್ತೊಬ್ಬ ಬೈಕಿನಲ್ಲಿ ಚಾಲನೆ ಮಾಡಿಕೊಂಡು ಚಿಗರಿ ಬಸ್ ಹೋಗುವಾಗ ಮಧ್ಯ ಬಂದು ಬಸ್ಸಿಗೆ ಡಿಕ್ಕಿ ಪಡಿಸಿರುತ್ತಾರೆ ಎಂದು ಬಸ್ಸಿನ ಚಾಲಕ ದೂರು ನೀಡಿರುತ್ತಾನೆ ಎಂದರೆ ಸಾಕ್ಷಿ ಗೊತ್ತು ಎನ್ನುತ್ತಾರೆ. ಪೊಲೀಸರ ಮುಂದೆ ನೀವೇನಾದರೂ ಹೇಳಿಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆ ಎನ್ನುತ್ತಾರೆ. ನನ್ನ ಮಗ ವಿದ್ಯಾಗಿರಿಯಲ್ಲಿರುವ ಬಜಾಜ್ ಶೋ ರೂಂ ನಲ್ಲಿ ಮೆಕ್ಯಾನಿಕ್ ಆಗಿ ಕೆಲಸ ಮಾಡುತ್ತಿದ್ದನು. ಅಪಘಾತವಾದ ಸಮಯದಲ್ಲಿ ನನ್ನ ಮಗನಿಗೆ 20 ವರ್ಷ ವಯಸ್ಸು ಇತ್ತು. ನನ್ನ ಮಗ ಪ್ರಥಮ ಪಿಯುಸಿ ಹೋಗಿ ಬಿಟ್ಟಿದ್ದನು. ಸದರಿ ಶೋ ರೂಂ ನಲ್ಲಿ ನನ್ನ ಮಗ ಒಂದು ವರ್ಷಗಳ ಕಾಲ ಕೆಲಸ ಮಾಡಿದ್ದನು. ನನ್ನ ಮಗ ಕೆಲಸ ಮಾಡುತ್ತಿದ್ದ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ. ನನ್ನ ಮಗನ ತಪ್ಪಿನಿಂದಲೇ ಅಪಘಾತವಾಗಿದೆ ಎಂದು ಬಸ್ ಚಾಲಕ ದೂರು ನೀಡಿದ್ದು ಆ ಪ್ರಕಾರ ಪೊಲೀಸರು ದೋಷಾರೋಪಣೆಪಟ್ಟಿಯನ್ನು ಕೂಡ ದಾಖಲಿಸಿದ್ದಾರೆ ಎಂದರೆ ಸರಿ. ನೀವೇನಾದರೂ ನನ್ನ ಮಗನ ತಪ್ಪಿಲ್ಲ ಎಂದು ದೂರು ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನನ್ನ ಮಗನಿಗೆ ತಿಂಗಳಿಗೆ 15 ಸಾವಿರ ರೂ. ಸಂಬಳ ಕೊಡುತ್ತಿದ್ದರು ಎಂದು ಹೇಳಿದ್ದು ಈ ಬಗ್ಗೆ ದಾಖಲೆ ಹಾಜರಪಡಿಸಿದ್ದೀರಾ ಎಂದರೆ ಸಾಕ್ಷಿ ಅವರು ನಗದು ಹಣ ಕೊಡುತ್ತಿದ್ದರು ಎನ್ನುತ್ತಾರೆ. ನನ್ನ ಮಗನಿಗೆ ಅಪಘಾತವಾಗಿದ್ದು 2022 ರಲ್ಲಿ ಆದರೆ ನಾನು 2024 ರಲ್ಲಿ ಈ ಅರ್ಜಿ ಸಲ್ಲಿಸಿದ್ದು ನೀವು ಶೋ ರೂಂ ಗೆ ಹೋಗಿ ಭೇಟಿಯಾಗಿದ್ದಿರಾ ಎಂದರೆ ಸಾಕ್ಷಿ ಮನೋಜ ಹಿರೇಮಠ ಎಂಬ ಮ್ಯಾನೇಜರ್ ರವರನ್ನು ಭೇಟಿ ಮಾಡಿ ಮಾತನಾಡಿ ಬಂದೆವು ಎನ್ನುತ್ತಾರೆ. ಎಲ್ಲಿ ಭೇಟಿ ಮಾಡಿದಿರಿ ಎಂದರೆ ಸಾಕ್ಷಿ ಈಗಾಗಲೇ ಎರಡು

ವರ್ಷಗಳಾಗಿರುವ ಕಾರಣ ನನಗೆ ನೆನಪಿಲ್ಲ ಎನ್ನುತ್ತಾರೆ. ನನ್ನ ಮಗನಿಗೆ ಅಪಘಾತವಾದ ನಂತರ ಆಸ್ಪತ್ರೆಗೆ ಯಾರು ಕರೆದುಕೊಂಡು ಹೋದರು ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಒಟ್ಟಿನಲ್ಲಿ ಶೋ ರೂಂನವರು ಕರೆದುಕೊಂಡು ಹೋಗಿರುತ್ತಾರೆ ಎನ್ನುತ್ತಾರೆ. ಸದರಿ ಅಪಘಾತ ಎಲ್ಲಿ ಆಗಿದೆ ಎಂಬುದನ್ನಾದರೂ ನಿಮಗೆ ಹೇಳಿದ್ದಾರಾ ಎಂದರೆ ಸಾಕ್ಷಿ ಮಾಡರ್ನ ಟಾಕೀಜ್ ಬಳಿ ಎನ್ನುತ್ತಾರೆ. ಸದರಿ ಶೋ ರೂಂ ಎಲ್ಲಿದೆ ಎಂದು ನಿಮಗೆ ಹೇಳಿದ್ದನೋ ಅಥವಾ ನೀವು ನೋಡಿದ್ದಿರೋ ಎಂದರೆ ಸಾಕ್ಷಿ ಮಗ ಹೇಳಿ ನನಗೆ ತೋರಿಸಿರುತ್ತಾನೆ ಎನ್ನುತ್ತಾರೆ. ನಿಮ್ಮ ಮಗ ನಿಮಗೆ ಶೋ ರೂಂ ಯಾವಾಗ ತೋರಿಸಿದ ನಂತರ ಎಂದರೆ ಸಾಕ್ಷಿ ಆತ ಜೀವಂತವಿದ್ದಾಗ ತೋರಿಸಿರುತ್ತಾನೆ ನನಗೆ ದಿನಾಂಕ, ತಿಂಗಳು ಮತ್ತು ವರ್ಷ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ನಿಮ್ಮ ಮಗ  ಮತ್ತೆ ಏನು ಹೇಳಿರುತ್ತಾನೆ ಎಂದರೆ ಸಾಕ್ಷಿ ಸದರಿ ಶೋ ರೂಂ ನಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿದ್ದನು ಎನ್ನುತ್ತಾರೆ. ಸಮಯ ಎಂದರೆ ಸಾಕ್ಷಿ ಬೆಳಿಗ್ಗೆ 9.00 ಗಂಟೆಗೆ ಹೋಗಿ ಸಾಯಂಕಾಲ 7.00 ಗಂಟೆಗೆ ಬರುತ್ತಿದ್ದನು ಎನ್ನುತ್ತಾರೆ. ನನ್ನ ಮಗ ಭಾನುವಾರದ ದಿನ ತನಗೆ ರಜೆ ಎಂಬುದಾಗಿ ಮತ್ತು ಸೋಮವಾರದಿಂದ ಶನಿವಾರದವರೆಗೆ ಕೆಲಸಕ್ಕೆ ಹೋಗುತ್ತಿದ್ದನ್ನು ಎನ್ನುತ್ತಾರೆ.

(**ಮುಂದುವರೆದ ಪಾಟೀ ಸವಾಲುಃ  ಮುಂದುವರೆದ ಪಾಟಿ ಸವಾಲಿಗೆ ಎದುರುದಾರರ ಪರ ಶ್ರೀ.ಪಿ ಎಂ ವಕೀಲರು ಸಮಯಾವಕಾಶ ಕೋರಿದ್ದು  ನೀಡಿ ಮುಂದೂಡಲಾಯಿತು).**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**